**ಈರಪ್ಪ ಎಂ. ಕಂಬಳಿ** ಕೊಪ್ಪಳ ಜಿಲ್ಲೆಯ ಯಲಬುರ್ಗದವರು. ಕರ್ನಾಟಕ ಸರ್ಕಾರದ ಭಾಷಾಂತರ ನಿರ್ದೇಶನಾಲಯದ ನಿರ್ದೇಶಕರಾಗಿದ್ದ ಅವರು ನಿವೃತ್ತಿಯ ನಂತರ ಬೆಂಗಳೂರುವಾಸಿ. ಲಲಿತ ಪ್ರಬಂಧ ಕ್ಷೇತ್ರದಲ್ಲಿ ಹೊಸನೀರು ಹರಿಸಿದವರಲ್ಲಿ ಪ್ರಮುಖರು. 'ಅರೆಸತ್ತ ಬದುಕು', 'ಹೆದ್ದಾರಿಗುಂಟ', 'ಹೀಗೊಂದು ಟಾಪ್ ಪಯಣ', 'ಚಾಚಾ ನೆಹರು ಮತ್ತು ಈಚಲ ಮರ', 'ಹುರುಳಿಕಟ್ಟು' ಅವರ ಜನಪ್ರಿಯ ಪ್ರಬಂಧ ಸಂಕಲನಗಳು.

ಬಹುತೇಕ ಭಾರತೀಯ ಭಾಷೆಗಳಿಗೆ ಹರಿದು ಬಂದದ್ದು ಅದರ ಹೆಗ್ಗಳಿಕೆ. ಅಷ್ಟೇ ಅಲ್ಲ ಕನ್ನಡದಲ್ಲೂ 'ಪಂಜರದ ಪಕ್ಷಿಯೇ ಇಲ್ಲಿ ನಿನಗಾರು ಗತಿ' ಎಂದು ಬಾಲ್ಯದಲ್ಲಿ ನಮ್ಮ ಪಠ್ಯ ಪುಸ್ತಕದಲ್ಲಿ ಓದಿದ್ದ ನೆನಪು. ಹೃದಯದಲ್ಲಿ ಅದ್ದಿ ಬರೆದ ಕಾವ್ಯಕ್ಕೆ ಯಾವುದೇ ಭಾಷೆಯ ಹಂಗಿಲ್ಲವಲ್ಲ.

ನಿನ್ನವರೆನ್ನುವರಾರನು ಕಾಣೆ ಹೃದಯ ಹೀನ ಈ ವಿಶ್ವದಲಿ ಕಣ್ಣೀರಿನ ಮಸಿ ಕುಡಿಕೆಯಲದ್ದಿ ಬರೆದಿಹನು ವಿಧಿ ಕಲಮಿನಲಿ...

ಮುಂದೆ ಬಂದ ಕವಿಗಳು ತಮ್ಮ ಗಜಲು, ನಾನಾ ನಮೂನಿ ಹೈಕು, ಶಾಯಿರಿಗಳಲ್ಲಿ, ಭಾವಗೀತೆಗಳಲ್ಲಿ, ಪ್ರೇಮಗೀತೆಗಳಲ್ಲಿ ಧಾರಾಳವಾಗಿ ಹೃದಯ ಪಾತ್ರೆಯನ್ನೇ ಮಸಿ-ದೌತಿ(ಕುಡಿಕೆ)ಗಳೆಂಬ ಅದ್ಭುತ ರೂಪಕವಾಗಿ ಬಳಸಿದ್ದು ಇವತ್ತಿಗೂ ಅರ್ಥವತ್ತಾಗಿದೆ.

1884ರಲ್ಲಿ ಮೊದಲ ಬಾರಿಗೆ ಇಂಕು ತುಂಬಿ ಬಳಸುವ ಫೌಂಟನ್ ಪೆನ್ನನ್ನು ಲೇವಿಸ್ ವಾಟರ್‌ಮ್ಯಾನ್ ಎಂಬ ಹೆಸರಿನಾತನು ಸೃಷ್ಟಿಸಿದನಂತೆ. ಅದೊಂದು ಕುತೂಹಲಕಾರಿ ಪ್ರಸಂಗ. ವಿಮಾ ಏಜೆಂಟನಾಗಿದ್ದ ವಾಟರ್‌ಮ್ಯಾನ್ ಅರ್ಜಿ ತುಂಬುವ ಅವಸರದಲ್ಲಿ ಮಸಿಕುಡಿಕೆಯಿಂದ ಕಲಮು ಅದ್ದಿ ಬರೆಯಲು ಹೋದಾಗ ಇಂಕಿನ ಗೊಣ್ಣೆ ಬಿದ್ದು ಹಾಳಾಯಿತಂತೆ. ಮತ್ತೊಂದು ಅರ್ಜಿ ಫಾರ್ಮ ಎತ್ತಿ ಹೊಸದಾಗಿ ಬರೆಯಬೇಕೆನ್ನುವ ಹೊತ್ತಿಗೆ ಗಿರಾಕಿ ಮತ್ತೊಬ್ಬನ ಪಾಲಾಗಿತ್ತಂತೆ. ಹೀಗಾಗಿ, ಅಂದಿನಿಂದಲೇ ಸುಧಾರಿತ ಬರೆಯುವ ಪೆನ್ನನ್ನು ಕಂಡು ಹಿಡಿಯಲು ಹೊರಟನಂತೆ. ವಾಟರ್ ಮ್ಯಾನ್ ಹೆಸರಿನಾತನೇ ಈ ಫೌಂಟನ್(ಕಾರಂಜಿ) ಪೆನ್ನು ಕಂಡುಹಿಡಿದಿದ್ದು ಕಾಕತಾಳಿಯವೇ ಇರಲಿ. ಅದೇ ನಮ್ಮನ್ನು ಅಕ್ಷರವಂತರನ್ನಾಗಿಸಿ, ಸಾಹಿತಿಯನ್ನಾಗಿ ರೂಪಿಸಿ ಇಂದಿಗೂ ಕೈಹಿಡಿದು ನಡೆಸುತ್ತಿರುವ ತಂದೆ ಈ ಫೌಂಟನ್ ಪೆನ್ನು.

ಹೈಸ್ಕೂಲು ಕಡೆ ಹೆಜ್ಜೆ ಹಾಕುವ ಹೊತ್ತಿಗೆ ಸದರಿ ಫೌಂಟನ್ ಪೆನ್ನಿನ ಪ್ರವೇಶವಾಗಿತ್ತು. ಕೂಲೀ ನಾಲೀ ಮಾಡಿಕೊಂಡು ಹೊಟ್ಟೆ ಹೊರೆಯುವ ಕುಟುಂಬ, ಸಾಲಿಗೆ ಹೋಗುತ್ತಿದ್ದ ನನಗೆ ಎಂಟಾಣೆಯ ಒಂದು ಫೌಂಟನ್ ಪೆನ್ನು ಪಡೆಯಲು ಆರು ತಿಂಗಳು ಕಾಯಬೇಕಾಯಿತು. ಕುಂಟ ಪ್ರಭಯ್ಯನ ಚುಟ್ಟಾದ ಅಂಗಡಿಯಲ್ಲಿ ಮೂರು ಪೈಸೆ ಕೊಟ್ಟು ಅದರ ಹೊಟ್ಟೆಗೆ ಮಸಿ (ಇಂಕು) ತುಂಬಿಸಿ ಅದಕ್ಕೆ ಟೋಪಣ್ ಹಾಕಿ ಜೋಪಾನವಾಗಿ ಅಂಗಿಯ ಎದೆಯ ಕಿಸೆಗೆ ಸಿಕ್ಕಿಸಿಕೊಂಡು ರಸ್ತೆಯಲ್ಲಿ ನಡೆದು ಹೋಗುತ್ತಿರಬೇಕಾದರೆ, ಥೇಟ್ 'ಜಂಭದ ಕೋಳಿ-ಕಸ್ತೂರಿಯ ತುತ್ತೂರಿ'ಯಂತೆಯೇ, ಪದೇ ಪದೇ ಎದೆಯ ಜೇಬನ್ನು ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತಿದ್ದೆನೆನ್ನಿರಿ-ಬೇರಾರ ಬಳಿಯೂ ಅದು ಇಲ್ಲವೆನ್ನುವಂತೆ.

ಪ್ರತಿ ಹದಿನೈದು ದಿನಗಳಿಗೊಮ್ಮೆ ಅದರ ಹಿಫಾಜತ್ತು. ಒಂದೊಂದಾಗಿ ಅದರ ಬಿಡಿ ಭಾಗಗಳನ್ನು ಕಳಚಿ ಬಿಸಿನೀರಿನಲ್ಲಿ ನೆನೆಸಿ, ಅದರ ಬರೆಯುವ ತುದಿಯಲ್ಲಿದ್ದ ನಾಲಿಗೆ-ನಿಬ್‌ಗಳನ್ನು ಕಿತ್ತು ತೆಗೆದು ತಿಕ್ಕಿ, ಅದರ ತುದಿಗೆ ಬ್ಲೇಡು ಹಾಕಿ ಕೆರೆಯುತ್ತಿದ್ದೆವು-ಕೆನೆ ಕಟ್ಟಿಕೊಂಡಿದ್ದರೆ. ಫೌಂಟನ್ ಎಂದರೇನೆ ಕಾರಂಜಿ-ಜಲಪಾತವಲ್ಲವೇ. ಬರೆಯುವಾಗ ಇಂಕು ಸರಾಗವಾಗಿ ಹರಿಯುವುದಕ್ಕಾಗಿ ಇಷ್ಟೆಲ್ಲ ಕಸರತ್ತು. ಕೆಲವೊಮ್ಮೆ ಬಾಯಿಂದ ಕಚ್ಚಿ ತೆಗೆದು ತೊಳೆಯಲು ಹಾಕುತ್ತಿದ್ದ ನಿಬ್ಬು ಪೆನ್ನಿನ ಸ್ವಯಂ ರಿಪೇರಿಗೆ ತೊಡಗಿದ ಪ್ರಯುಕ್ತ ಮಸಿಯನ್ನು ಅಂಗೈ-ತುಟಿಗಳಿಗೆ ಲೇಪಿಸಿಕೊಂಡವರಾಗಿ-ಗ್ಯಾರೇಜಿನಲ್ಲಿ ಕೆಲಸ ಮಾಡುವ ಹುಡುಗರಂತೇ ತೋರುತ್ತಿದ್ದೆವು ಥೇಟು. ಹಳೆ ಬಟ್ಟೆಯಲ್ಲಿ ಒರೆಸಿ ಒಣಗಿಸಿ, ಹೊಸದಾಗಿ ಅದರ ಹೊಟ್ಟೆಗೆ ಇಂಕು ತುಂಬಿಸಲು ಕಾಡಿಬೇಡಿ ಮೂರು ಪೈಸೆ ಪಡೆದುಕೊಂಡು ಹೊರಟಾಗ, ಮನೆಯ ಅಮಾಯಕ ಮಂದಿ-'ಮುಂದೆ ಇವನು ಜೀಪಿನಲ್ಲಿ